ರಾಯಚೂರು ವಿಶ್ವವಿದ್ಯಾಲಯ RAICHUR UNIVERSITY

ಯರಗೇರಾ–584133, ರಾಯಚೂರು, ಕರ್ನಾಟಕ, ಭಾರತ

Office No. +919141030953 ಪರೀಕ್ಷಾ ವಿಭಾಗ E-mail: registrarrur@gmail.com

ಕ್ರ.ಸಂ: ರಾವಿರಾ/ಪರೀಕ್ಷಾ/ಯು.ಜಿ/2023-24/ 822 ದಿನಾಂಕ: 18.03.2024

## ಸುತ್ತೋಲೆ

### ಪರೀಕ್ಷಾ ನೋಡಲ್ ಅಧಿಕಾರಿಗಳಿಗೆ ವಿಶೇಷ ಸೂಚನೆಗಳು:

1. UG ಸ್ನಾತಕ ಪರೀಕ್ಷೆಗಳನ್ನು 18.03.2024 ರಿಂದ ನಿಗಧಿ ಪಡಿಸಲಾಗಿತ್ತು ಆದರೆ, **PUC** ಪರೀಕ್ಷೆಗಳ ನಿಮಿತ್ತ 18.03.2024, 19.03.2024 ಹಾಗೂ 20.03.2024ರ ಪರೀಕ್ಷೆಗಳನ್ನು ಈ ಕೆಳ ಕಾಣಿಸಿದ ದಿನಾಂಕಗಳ ಕ್ರಮವಾಗಿ ಮುಂದೂಡಲಾಗಿದ್ದು.

| ಕ್ರ.ಸಂ | ಹಳೆಯ ದಿನಾಂಕಗಳು | ಮುಂದೂಡಿದ ದಿನಾಂಕಗಳು |
|---|---|---|
| 1 | 18.03.2024 | 19.04.2024 |
| 2 | 19.03.2024 | 20.04.2024 |
| 3 | 20.03.2024 | 21.04.2024 |

ಈ ಪ್ರಶ್ನೆಪತ್ರಿಕೆಗಳನ್ನು ಸುರಕ್ಷಿತವಾಗಿಡಲು ಸೂಚಿಸಿ, ದಿನಾಂಕ 21.03.2024 ರಿಂದ ವೇಳಾಪಟ್ಟಿಗೆ ಅನುಗುಣವಾಗಿ ದಿನಾಂಕಗಳನ್ನು ಪರಿಶೀಲಿಸಿ ಪರೀಕ್ಷೆಗಳನ್ನು, ನಡೆಸಲು ಸೂಚಿಸಲಾಗಿದೆ.

2. ಪರೀಕ್ಷೆಯ ದಿನದಂದು ಪ್ರಶ್ನೆಪತ್ರಿಕೆಗಳನ್ನು ಆಯಾ ಪರೀಕ್ಷಾ ಕೇಂದ್ರದ ಪ್ರಾಂಶುಪಾಲರು ದೃಢೀಕರಿಸಿದ ಸಿಬ್ಬಂದಿಗೆ ಕಾಲೇಜಿನ ಮೋಹರು ಮತ್ತು ಸಹಿ ಮೂಲಕ **ಬೆಳ್ಳಿಗ್ಗೆ 9.15 ಕ್ಕೆ ಹಾಗೂ ಮಧ್ಯಾಹ್ನ 1.15ಕ್ಕೆ** ಪ್ರಶ್ನೆ ಪತ್ರಿಕೆಗಳನ್ನು ವಿತರಿಸತಕ್ಕದ್ದು
3. ನೋಡಲ್ ಕೇಂದ್ರದಿಂದ 5 ಕೀ.ಮಿ. ದೂರವಿರುವ ಪರೀಕ್ಷಾ ಕೇಂದ್ರಗಳಿಗೆ ಮುಂಜಾನೆ 9.15 ಕ್ಕೆ ಬೆಳಗ್ಗೆ ಮತ್ತು ಮಧ್ಯಾಹ್ನದ ಪ್ರಶ್ನೆ ಪತ್ರಿಕೆಗಳನ್ನು ವಿತರಿಸಬೇಕು ಹಾಗೂ ಸಾಯಂಕಾಲ ಎರಡು ಪರೀಕ್ಷೆಗಳ ಉತ್ತರ ಪತ್ರಿಕೆಗಳನ್ನು (Bundles) ಸಂಗ್ರಹಿಸಿಕೊಳ್ಳಬೇಕು.
4. ಈ ಬಾರಿ ಪ್ರಶ್ನೆ ಪತ್ರಿಕೆಗಳನ್ನು ಕಾಲೇಜು ವೈಜ್ ಪ್ಯಾಕಿಂಗ್ ಆಗಿರುವುದರಿಂದ ಪರೀಕ್ಷಾ ಕೇಂದ್ರದ ಪ್ರಶ್ನೆ ಪತ್ರಿಕೆಗಳನ್ನು ಹಾಗೂ ಟ್ಯಾಗ್ ಆಗಿರುವ ಕಾಲೇಜುಗಳ ಪ್ರಶ್ನೆಪತ್ರಿಕೆಗಳನ್ನು ಪ್ರತ್ಯೇಕವಾಗಿ ವಿತರಿಸಿ ಪರೀಕ್ಷೆಗಳನ್ನು ನಡೆಸತಕ್ಕದ್ದು.
5. ಪ್ರಥಮ ಸೆಮಿಸ್ಟರನ ಪ್ರಶ್ನೇ ಪತ್ರಿಕೆಗಳ ಬಾಕ್ಸ್‌ಗಳ ಮೇಲೆ ಬಿಳಿ ಲೇಬಲ್ ಹಾಗೂ ತೃತೀಯ ಸೆಮಿಸ್ಟರ್‌ನ ಬಾಕ್ಸ್‌ಗಳ ಮೇಲೆ ನೀಲಿ ಲೇಬಲ್ ಮತ್ತು ಐದನೇಯ ಸೆಮಿಸ್ಟರ್ ಬಾಕ್ಸ್‌ಗಳ ಮೇಲೆ ಪಿಂಕ್ ಲೇಬಲ್‌ಗಳನ್ನು ಅಂಟಿಸಲಾಗಿದೆ. ಅದನ್ನು ಪರಿಶೀಲಿಸಿ ಪ್ರಶ್ನೆ ಪತ್ರಿಕೆಗಳನ್ನು ವಿತರಿಸಬೇಕು.
6. ಪರೀಕ್ಷೆ ಮುಗಿದ ನಂತರ ಪರೀಕ್ಷಾ ಕೇಂದ್ರಗಳಿಂದ ಉತ್ತರ ಪತ್ರಿಕೆಗಳನ್ನು ಸ್ವೀಕರಿಸಿ ವಿಶ್ವವಿದ್ಯಾಲಯದ ಸಿಬ್ಬಂದಿಗಳು ತಮ್ಮ ಕೇಂದ್ರಕ್ಕೆ ಭೇಟಿ ನೀಡಿದಾಗ ಸ್ವೀಕರಿಸಿದಂತಹ ಉತ್ತರ ಪತ್ರಿಕೆಗಳನ್ನು (Bundles) ಅವರಿಗೆ ಒಪ್ಪಿಸಬೇಕೆಂದು ಈ ಮೂಲಕ ಸೂಚಿಸಲಾಗಿದೆ.
7. ವಿಶ್ವವಿದ್ಯಾಲಯದ ಪರೀಕ್ಷಾ ಕಾರ್ಯಗಳಿಗೆ ಸಂಬಂಧಿಸಿದಂತೆ ಯಾವುದೇ ಮಾಹಿತಿಗಾಗಿ ವಿಶ್ವವಿದ್ಯಾಲಯ ನೇಮಿಸಿದ ಸಿಬ್ಬಂದಿಯನ್ನು ವಿಶ್ವವಿದ್ಯಾಲಯವು ಯಾವುದೇ ಸಮಯದಲ್ಲಿ ಸಂಪರ್ಕಿಸಬಹುದು ಆದ್ದರಿಂದ ನೋಡಲ್ ಅಧಿಕಾರಿಗಳು ಹಾಗೂ ಸಿಬ್ಬಂದಿ ಸದಾ ಸಿದ್ದರಾಗಿರಬೇಕೆಂದು ಈ ಮೂಲಕ ಸೂಚಿಸಲಾಗಿದೆ.
8. ವಿಶ್ವವಿದ್ಯಾಲಯದ ನಿಯಮಾನುಸಾರ ಸಿಬ್ಬಂದಿಗಳಿಗೆ ಪರೀಕ್ಷಾ ಕಾರ್ಯಗಳಿಗೆ ನೀಡುವ ಸಂಭಾವನೆ ಮಂಜೂರಿಸಲಾಗುವುದು

ವಿಶ್ವವಿದ್ಯಾಲಯದಲ್ಲಿ ಪರೀಕ್ಷಾ ಕಾರ್ಯಗಳಿಗೆ ಸಿಬ್ಬಂದಿಯನ್ನು ನೇಮಿಸಿ ತಮ್ಮ ಜವಾಬ್ದಾರಿಗಳನ್ನು KSU Act 2000ರ ಪ್ರಕಾರ ನಿರ್ವಹಿಸಬೇಕೆಂದು ಈ ಮೂಲಕ ಸೂಚಿಸಲಾಗಿದೆ.

18/03/24

(ಪ್ರೊ. ಯರಿಸ್ವಾಮಿ.ಎಂ)
ಕುಲಸಚಿವರು (ಮೌಲ್ಯಮಾಪನ)
ರಾಯಚೂರು ವಿಶ್ವವಿದ್ಯಾಲಯ, ರಾಯಚೂರು

**ಪ್ರತಿಯನ್ನು :**

1. ಮಾನ್ಯ ಕುಲಪತಿಗಳು ಕಾರ್ಯದರ್ಶಿಗಳು/ ಮಾನ್ಯ ಕುಲಸಚಿವರ ಆಪ್ತ ಸಹಾಯಕ ರಾಯಚೂರು ವಿಶ್ವವಿದ್ಯಾಲಯ, ರಾಯಚೂರು.
2. ಕುಲಸಚಿವರು ಮೌಲ್ಯಮಾಪನ ಆಪ್ತ ಕಾರ್ಯದರ್ಶಿ ರಾಯಚೂರು ವಿಶ್ವವಿದ್ಯಾಲಯ, ರಾಯಚೂರು.
3. ಉಪಕುಲಸಚಿವರು, ರಾಯಚೂರು ವಿಶ್ವವಿದ್ಯಾಲಯ, ರಾಯಚೂರು.
4. ಹಣಕಾಸು ಅಧಿಕಾರಿಗಳು ರಾಯಚೂರು ವಿಶ್ವವಿದ್ಯಾಲಯ, ರಾಯಚೂರು ಮಾಹಿತಿಗಾಗಿ
5. [illegible]